**ಸಾಕ್ಷಿಯನ್ನು ದಿನಾಂಕಃ 28.11.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ಆರೋಪಿ ಪರ ಶ್ರೀ ಎನ್.ಎಸ್, ವಕೀಲರಿಂದಃ**

2022 ರಲ್ಲಿ ನಂಜನಗೂಡಿನ ರಾಮಸ್ವಾಮಿ ಬಡಾವಣೆಯಲ್ಲಿರುವ ಮನೆಗೆ ಹೋಗಿರುತ್ತೇನೆಂದು ಹೇಳಿದ ಸಮಯದಲ್ಲಿ ಆರೋಪಿ ತಮ್ಮ ಕುಟುಂಬ ಸಮೇತ ಮೈಸೂರಿನ ಬಾಡಿಗೆ ಮನೆಯಲ್ಲಿ ವಾಸವಿದ್ದರು ಎಂದರೆ ರಾಮಸ್ವಾಮಿ ಬಡಾವಣೆಯಲ್ಲಿಯೂ ಮನೆ ಇತ್ತು ಮತ್ತು ಮೈಸೂರಿನಿಂದ ಅವರು ಈ ಮನೆಗೂ ಬರುತ್ತಿದ್ದರಿಂದ ರಾಮಸ್ವಾಮಿ ಬಡಾವಣೆಯಲ್ಲಿರುವ ಮನೆಗೆ ಹೋಗಿದ್ದೆ. 2020 ರಲ್ಲಿ ಆರೋಪಿಗೆ ರಾಮಸ್ವಾಮಿ ಬಡಾವಣೆಯಲ್ಲಿ ಯಾವುದೇ ಮನೆಯಿರಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಆರೋಪಿಯ ಸಹಿಯನ್ನು ಹೊರತುಪಡಿಸಿ ಉಳಿದ ಎಲ್ಲಾ ಬರವಣಿಗೆಯನ್ನು ಯಾರು ಬರೆದಿರುತ್ತಾರೆ ಎಂದರೆ ನಾನು ಬರೆದಿಲ್ಲ, ಆರೋಪಿ ಬರೆದಿರುತ್ತಾರೋ, ಇಲ್ಲವೋ ನನಗೆ ಗೊತ್ತಿಲ್ಲ, ಆದರೆ ಚೆಕ್ ನ್ನು ಕೊಟ್ಟು ಬ್ಯಾಂಕಿಗೆ ಹಾಕಿಕೊಳ್ಳಿ ಎಂದು ಹೇಳಿರುತ್ತಾರೆ. ಆರೋಪಿ ಚೆಕ್ಕನ್ನು ಕೊಡುವಾಗ ಚೆಕ್ ನ್ನು ಬರೆಯಲಾಗಿತ್ತು, ಆದರೆ ಆರೋಪಿ ಬರೆದಿರುತ್ತಾರೋ, ಇಲ್ಲವೋ ನಾನು ನೋಡಿಲ್ಲ. ಆರೋಪಿಯ ಸಹಿ ಮತ್ತು ಉಳಿದ ಬರವಣಿಗೆಗಳ ನಡುವೆ ವ್ಯತ್ಯಾಸವಿರುತ್ತದೆ. ನಿಪಿ-1 ರಲ್ಲಿ ಮೋಹನ ಎಂದು ಇರುವ ಸಹಿಯನ್ನು ಮೊದಲೇ ಮಾಡಿದ್ದು, ಉಳಿದ ಬರವಣಿಗೆಗಳಾದ ಗೋವಿಂದರಾಜು, ರೂ. 9,00,000/-, ದಿನಾಂಕ, ತಿಂಗಳು ಮತ್ತು ವರ್ಷವನ್ನು 1-2 ವರ್ಷಗಳ ನಂತರ ಬರೆಯಲಾಗಿದೆ ಎಂದರೆ ನನಗೆ ಗೊತ್ತಾಗುವುದಿಲ್ಲ. ಇದರ ವೈಜ್ಞಾನಿಕ ತನಿಖೆ ಮಾಡಲು ನನ್ನದೇನು ತಕರಾರು ಇರುವುದಿಲ್ಲ. ಬ್ಯಾಂಕ್ ನವರು ನಿಪಿ-2 ರಂತೆ ಹಿಂಬರಹ ನೀಡುವಾಗ exeeds arrangment ಎಂದು ನೀಡಿರುತ್ತಾರೆ ಎಂದರೆ ಸರಿ. ಒಂದು ವೇಳೆ ಆರೋಪಿ ನನ್ನ ಬಳಿ ಸಾಲ ಪಡೆದುಕೊಂಡಿದ್ದರೆ ಆ

ಸಾಲದ ಮೊತ್ತಕ್ಕೆ ಮಾತ್ರ ಚೆಕ್ಕನ್ನು ನೀಡುತ್ತಿದ್ದರು, ಆದರೆ ನಾನು ಚೆಕ್ ನಲ್ಲಿ ಹೆಚ್ಚು ಮೊತ್ತವನ್ನು ನಮೂದಿಸಿಕೊಂಡು ಬರೆದುಕೊಂಡಿರುವುದರಿಂದ ಬ್ಯಾಂಕ್ ನವರು ನಿಪಿ-2 ರಂತೆ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ.

ಆರೋಪಿಯ ತಂಗಿಯ ಮದುವೆಯಾದ ವಿಚಾರ ಗೊತ್ತಿರುತ್ತದೆ, ಆದರೆ ನಾನು ಆರೋಪಿಯ ತಂಗಿಯ ಮದುವೆಗೆ ಹೋಗಿರುವುದಿಲ್ಲ. ಆರೋಪಿಯ ತಂಗಿಯ ಮದುವೆ 2021 ರಲ್ಲಿ ಆಗಿರುತ್ತದೆ ಎಂದರೆ ಸರಿ. ಆರೋಪಿ ತಂಗಿಯ ಮದುವೆಯ ಸಮಯದಲ್ಲಿ ಮದುವೆ ಖರ್ಚಿಗಾಗಿ ಆರೋಪಿ ನನ್ನ ಬಳಿ ರೂ. 50,000/-ಸಾಲ ಪಡೆದಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ ರೂ.200/- ಮುಖಬೆಲೆಯ ನವೆಂಬರ್ 2021ರ ಖಾಲಿ ಛಾಪಾಕಾಗದ ಮತ್ತು ಈ ಪ್ರಕರಣದ ವಿವಾದಿತ ಚೆಕ್ಕನ್ನು ಒಳಗೊಂಡಂತೆ ಎರಡು ಚೆಕ್ ಗಳನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ದಾಖ್ಲೆಗಳು ಈ ಮೇಲೆ ಹೇಳಿದಂತೆ ಆರೋಪಿ ಪಡೆದುಕೊಂಡಿದ್ದ ರೂ.50,000/- ಸಾಲದ ವ್ಯವಹಾರಕ್ಕೆ ಪಡೆದುಕೊಂಡ ದಾಖಲೆಗಳಾಗಿರುತ್ತವೆ ಎಂದರೆ ಸರಿಯಲ್ಲ. ಖಾಲಿ ಛಾಪಾಕಾಗದದ ಮೇಲೆ ಬರವಣಿಗೆ ಮಾಡಿ ಹಣ ವಸೂಲಾತಿಗಾಗಿ ದಾವೆ ಸಲ್ಲಿಸಿದರೆ ನ್ಯಾಯಾಲಯದ ಶುಲ್ಕವನ್ನು ಪಾವತಿಸಬೇಕಾಗುತ್ತದೆಂಬ ಕಾರಣದಿಂದ ಎರಡು ಚೆಕ್ ಗಳ ಪೈಕಿ ವಿವಾದಿತ ಚೆಕ್ಕಿನ ಮೇಲೆ ರೂ. 9,00,000/- ಎಂದು ನಮೂದಿಸಿಕೊಂಡು ರೂ.1,50,000/-, 5,00,000/- ಮತ್ತು ರೂ.2,50,000/- ದಂತೆ ಕಂತು ಮೂಲಕ ಆರೋಪಿಗೆ ಕೊಟ್ಟಿರುತ್ತೇನೆ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯು ಬ್ರೇಕ್ಸ್ ಇಂಡಿಯಾ ಲಿಮಿಟೆಡ್ ಕಾರ್ಖಾನೆಯ ಖಾಯಂ ಕಾರ್ಮಿಕ ನೌಕರನಾಗಿರುತ್ತಾನೆ ಎಂದರೆ ಸರಿ. ಆರೋಪಿಗೆ ಸದರಿ ಕಾರ್ಖಾನೆಯಲ್ಲಿ ತಿಂಗಳಿಗೆ ಸುಮಾರು

ರೂ.50,000/- ಸಂಬಳ ಕೊಡುತ್ತಾರೆ. ಆರೋಪಿಯ ಹೆಂಡತಿ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರಿದು ಆರೋಪಿಯ ಹೆಂಡತಿ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅವರನ್ನು ಖಾಯಂ ನೌಕರಳನ್ನಾಗಿ ಮಾಡಲು ಹಣ ಕೊಡಬೇಕೆಂದು ಆರೋಪಿ ನನ್ನ ಬಳಿ ಹಣ ಪಡೆದಿರುತ್ತಾರೆಂದು ನುಡಿಯುತ್ತಾರೆ. ಈ ಮಾಹಿತಿಯನ್ನು ನಮ್ಮ ವಕೀಲರಿಗೆ ಈ ಫಿರ್ಯಾದು ಸಲ್ಲಿಸುವ ಸಮಯದಲ್ಲಿ ಹೇಳಿರುತ್ತೇನೆ. ಈ ವಿಚಾರವನ್ನು ಲೀಗಲ್ ನೋಟಿಸ್ ನಲ್ಲಾಗಲಿ ಅಥವಾ ದೂರಿನಲ್ಲಾಗಲಿ ಅಥವಾ ಪ್ರಮಾಣಪತ್ರದಲ್ಲಾಗಲಿ ಹೇಳಿ ಬರೆಯಿಸಿರುವುದಿಲ್ಲ. ಆರೋಪಿಗೆ ಇಬ್ಬರು ಹೆಣ್ಣುಮಕ್ಕಳಿರುತ್ತಾರೆ ಎಂದರೆ ಸರಿ. ಆರೋಪಿಯ ಇಬ್ಬರು ಹೆಣ್ಣುಮಕ್ಕಳ ಪೈಕಿ ಒಬ್ಬರು ಸ್ನಾತಕ್ಕೋತ್ತರ ಗಣಕಯಂತ್ರ ವಿಭಾಗದಲ್ಲಿ ಪದವಿ ಪಡೆದು ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಇನ್ನೊಬ್ಬರು ದಂತ ವೈದ್ಯಕೀಯ ಕೋರ್ಸ್ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಆರೋಪಿ ಆರ್ಥಿಕವಾಗಿ ಸಬಲರಾಗಿದ್ದು, ನಾನು ಹೇಳಿದಂತೆ ರೂ.9,00,000/- ಪಡೆದುಕೊಳ್ಳುವಂತಹ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಬ್ಯಾಂಕ್ ನಿಂದ ಹಣ ಪಡೆದು ಕೊಟ್ಟಿರುವುದಿಲ್ಲ, ಆದರೆ ನನ್ನ ಮನೆಯಲ್ಲಿಟ್ಟುಕೊಂಡಿದ್ದ ಮನೆಯನ್ನು ಕೊಟ್ಟಿರುತ್ತೇನೆ. ನನ್ನ ಬಳಿ ರೂ.9,00,000/- ಹಣ ಇತ್ತು ಎಂದು ತೋರಿಸಲು ಬ್ಯಾಂಕ್ ಪಾಸ್ ಪುಸ್ತಕವನ್ನು ಹಾಜರುಪಡಿಸುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. ದಿನಾಂಕ 04.12.2021 ರಂದು ರೂ. 1,50,000/-, ದಿನಾಂಕ 13.01.2021 ರಂದು ರೂ. 5,00,000/- ಮತ್ತು ದಿನಾಂಕ 06.05.2022 ರಂದು ರೂ. 2,50,000/- ಹಣ ನನ್ನ ಬಳಿಯಿರಲಿಲ್ಲ ಎಂದರೆ ಸರಿಯಲ್ಲ.

ನಾನು ಪರಿಚಯವಿದ್ದವರಿಗೆ ಮಾತ್ರ ಬಡ್ಡಿಗಾಗಿ ಹಣ ಕೊಡುತ್ತೇನೆ. ಶಿವಣ್ಣ ಎಂಬುವವರು ನನಗೆ ರೂ.6,00,000/- ಕೊಡಬೇಕೆಂದು ಅವರ ವಿರುದ್ಧ ಕ್ರಿಮಿನಲ್ ಕ್ಯಾಲೇಂಡರ್ ಕೇಸ್ ಸಂಖ್ಯೆ 506/2023 ರಂತೆ ಚೆಕ್ ಅಮಾನ್ಯ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. ಅದೇ ರೀತಿ ರೇವಣ್ಣ ಎಂಬುವವರು ನನಗೆ ರೂ.5,00,000/- ಕೊಡಬೇಕೆಂದು ಅವರ ವಿರುದ್ಧವೂ ಚೆಕ್ ಅಮಾನ್ಯ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿ. 2021-22 ರಿಂದ 2025 ರ ನಡುವೆ ಈ ಪ್ರಕರಣ ಆರೋಪಿ, ಶಿವಣ್ಣ ಮತ್ತು ರೇವಣ್ಣ ಎಂಬುವವರಿಂದ ಒಟ್ಟು ರೂ.20,00,000/- ವ್ಯವಹಾರ ಮಾಡಿರುತ್ತೇನೆ ಎಂದು ಪ್ರಕರಣ ದಾಖಲಿರುತ್ತೇನೆ. ನಾನು ಈ ಮೇಲೆ ಹೇಳಿದ ವ್ಯಕ್ತಿಗಳಿಂದ ಹಾಗು ಆರೋಪಿಯಿಂದ ಭದ್ರತೆಗಾಗಿ ಖಾಲಿ ಚೆಕ್ ಗಳನ್ನು ಪಡೆದು, ಅವರ ಮೇಲೆ ಬಡ್ಡಿ , ಚಕ್ರಬಡ್ಡಿ ಹಾಗು ಸುಸ್ತಿಬಡ್ಡಿ ವಿಧಿಸಿ ಅವರು ಕೊಡದೆ ಇದ್ದ ಕಾರಣ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಹೆಚ್ಚಿನ ಮೊತ್ತವನ್ನು ನಮೂದಿಸಿ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಚೆಕ್ ಅಮಾನ್ಯ ಪ್ರಕರಣಗಳನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಇದೇ ರೀತಿ ನಮ್ಮ ಊರಿನಲ್ಲಿಯೂ ಕೂಡ ನಾನು ಬಡ್ಡಿ ಕೊಡದಿದ್ದರೆ ಹೆಚ್ಚಿನ ಹಣಕ್ಕೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ, ಹಣ ವಸೂಲಾತಿ ಮಾಡಿಕೊಳ್ಳುತ್ತೇನೆಂದು ಬೆದರಿಕೆ ಹಾಕುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿ ತನ್ನ ತಂಗಿಯ ಮದುವೆ ಖರ್ಚಿಗಾಗಿ 2021 ರಲ್ಲಿ ಪಡೆದಿದ್ದ ರೂ. 50,000/- ಹಣವನ್ನು ರೂ. 3/- ರಂತೆ ಬಡ್ಡಿಸಹಿತ ವಾಪಸ್ ಮಾಡಿದ್ದು, ನಂತರ ವಿವಾದಿತ ಚೆಕ್ಕನ್ನು ವಾಪಸ್ ಕೊಡುವಂತೆ ಕೇಳಿದಾಗ ಸದರಿ ಚೆಕ್ಕನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲವೆಂದು ಭರವಸೆ ನೀಡಿ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಖಾಸಗಿ ಕಂಪನಿಯ ನೌಕರನಾಗಿರುವುದರಿಂದ ಆತನಿಂದ ಹೆಚ್ಚಿನ ಹಣವನ್ನು ವಸೂಲಿ ಮಾಡುವ ಉದ್ದೇಶದಿಂದ ದಿನಾಂಕ 04.12.2021,

13.01.2022 ಮತ್ತು 06.05.2022 ರಂದು ಹಣ ಕೊಟ್ಟಿರುತ್ತೇನೆಂದು ಸುಳ್ಳು ಅಂಶಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನಾಂಕಗಳಂದು ಆರೋಪಿ ನನ್ನನ್ನು ಭೇಟಿ ಮಾಡಿಲ್ಲ ಮತ್ತು ನನ್ನಿಂದ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಈ ಮೇಲೆ ಹೇಳಿದ ದಿನಾಂಕಗಳಂದು ಆರೋಪಿಗೆ ಹಣ ನೀಡಿದ್ದ ಪಕ್ಷದಲ್ಲಿ ದಾಖಲೆಗಳನ್ನು ಪಡೆದುಕೊಂಡು ಹಣ ಕೊಡುತ್ತಿದ್ದೆ, ಆದ್ದರಿಂದ ಆರೋಪಿ ಸದರಿ ದಿನಾಂಕಗಳಂದು ಯಾವುದೇ ಹಣ ಪಡೆದಿಲ್ಲವಾದ್ದರಿಂದ ನಾನು ಆರೋಪಿಯಿಂದ ಯಾವುದೇ ದಾಖಲೆ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯನ್ನು ಭೇಟಿಯಾಗಿ ಹಣ ಕೇಳಿರುವುದಿಲ್ಲ ಮತ್ತು ಆ ದಿವಸ ಆರೋಪಿ ರೂ.9,00,000/- ಗಳ ಚೆಕ್ಕನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳುಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**

**ನಂಜನಗೂಡು.**